ತೆರೆದ ಸ್ಥಿತಿಯಲ್ಲಿತ್ತು. ಲ್ಯಾಪ್‌ಟಾಪ್ ಮಾತ್ರ ಇರಲಿಲ್ಲ! ಅಂದರೆ, ಆಗಂತುಕ ಅದನ್ನು ಎತ್ತಿಕೊಂಡು ಹೋಗಿರಬೇಕು!! ಅಲ್ಲಿ ಸಿಕ್ಕಿದ ಇನ್ನೊಂದು ಕಾಗದಪತ್ರ ವಿಚಿತ್ರವಾಗಿತ್ತು. ಅದೊಂದು ವೈದ್ಯಕೀಯ ತಪಾಸಣಾ ವರದಿ. ಅದರಂತೆ ಚೆಟ್ಟಿಯಪ್ಪನ ದೇಹದಲ್ಲಿ ಗಡ್ಡೆಯೊಂದು ಪತ್ತೆಯಾಗಿತ್ತಂತೆ. ಅದು ಕ್ಯಾನ್ಸರ್ ಇರಬಹುದೆಂದು ವರದಿ ಹೇಳುತ್ತಿತ್ತು! ಹಜಾರದಲ್ಲಿ ಬ್ರಿಟಿಷ್ ಶೈಲಿಯ ಹೊಗೆಗೂಡು. ಫೈರ್ ಪ್ಲೇಸ್. ಚಳಿಗೆ ಮೈ ಕಾಯಿಸುವ ವ್ಯವಸ್ಥೆ. ಚೆಟ್ಟಿಯಪ್ಪನದ್ದು ಹಳೆಯ ಬ್ರಿಟಿಷ್ ಮಾದರಿಯ ಮನೆ. ಆಗಿನ ಚಳಿಗೆ ಹೊಗೆಗೂಡು ಅಗತ್ಯ. ಹಲವು ದಿನಗಳಿಂದ ಬೆಂಕಿಯಿಲ್ಲದೆ ಅದು ಮಂಕಾಗಿತ್ತು.

"ಆ ಅಪರಿಚಿತ ಮನೆಯೊಳಗೆ ಹೇಗೆ ಬಂದ?"

"ಓಹ್! ಬಿದ್ದಪ್ಪ, ನಾನು ಯೋಚನೆ ಮಾಡೇ ಇರಲಿಲ್ಲ. ಎಲ್ಲೂ ಬಲಾತ್ಕಾರವಾಗಿ ಒಳ ನುಗ್ಗಿದ ಕುರುಹುಗಳಿಲ್ಲ. ಅಂದರೆ, ಆತನಲ್ಲಿ ಕೀ ಇದ್ದಿರಬೇಕು!"

ಅನಂತರ ನಾವು ಅಲ್ಲಿಂದ ಕಾಲು ಕಿತ್ತೆವು.

★★★

ಚೆಟ್ಟಿಯಪ್ಪನ ಅಡಿಗೆಯಾಳು ಬಟ್ಯನ ಈರಪ್ಪನಲ್ಲಿ ಮನೆಯ ಕೀಯೊಂದು ಇದೆಯೆಂಬ ಮಾಹಿತಿಯನ್ನು ಡಿಸೋಜ ನೀಡಿದ್ದ. ಹಿಂದಿನ ದಿನವಷ್ಟೇ ಕೋರ್ಟಿನ ಅನುಮತಿಯೊಂದಿಗೆ ಅದನ್ನು ಆತನಿಗೆ ಹಸ್ತಾಂತರಿಸಲಾಗಿತ್ತಂತೆ. ನಾವು ಈರಪ್ಪನ ಮನೆ ತಲುಪಿದಾಗ ಮಧ್ಯಾಹ್ನದ ಬಿಸಿಲು ಚುರುಕಾಗಿತ್ತು.

ಚೆಟ್ಟಿಯಪ್ಪ ಮತ್ತು ಮಿಥಿಲಾಳ ಜಗಳಕ್ಕೆ ಹೊಸ ಆಯಾಮವೊಂದನ್ನು ಈರಪ್ಪ ನೀಡಿದ. ಅದು ಮಿಥಿಲಾಳ ಅನೈತಿಕ ಸಂಬಂಧ. ಆಕೆ ಕೆಲಸ ಮಾಡುತ್ತಿರುವ ಸಂಸ್ಥೆಯ ಸಾಬು ವರ್ಗೀಸ್ ಎನ್ನುವವನೊಂದಿಗೆ ಆಕೆಗೆ ಅಕ್ರಮ ಸಂಬಂಧವಿತ್ತಂತೆ. ಚೆಟ್ಟಿಯಪ್ಪ ಆಕೆಗೆ ಹಲವು ಬಾರಿ ಆತನಿಂದ ದೂರವಾಗುವಂತೆ ಸಲಹೆ ನೀಡಿದ್ದರೂ, ಆಕೆ ನಿರ್ಲಕ್ಷಿಸಿದ್ದಳಂತೆ. ಅದೇ ವಿಷಯಕ್ಕೆ ಅವರಲ್ಲಿ ಆಗಾಗ ಜಗಳವಾಗುತ್ತಿತ್ತಂತೆ.

ಮಿಥಿಲಾಗೆ ಬೆಂಕಿ ಅವಘಡವಾದಾಗ, ಚೆಟ್ಟಿಯಪ್ಪ ಕರೆ ಮಾಡಿದರಂತೆ. ಈರಪ್ಪ ಬರುವಾಗ, ಆಕೆಗೆ ಪ್ರಜ್ಞೆ ಇರಲಿಲ್ಲವಂತೆ. ತಕ್ಷಣ ಆಂಬುಲೆನ್ಸಿನಲ್ಲಿ ಆಸ್ಪತ್ರೆಗೆ ಸಾಗಿಸಿದರೂ, ಸಂಜೆ ಆಕೆ ಕೊನೆಯುಸಿರೆಳೆದರಂತೆ. ಬೆಂಕಿ ಅವಘಡ ಸಂಭವಿಸುವಾಗ ಮನೆಯಲ್ಲಿ ಚೆಟ್ಟಿಯಪ್ಪ ಮತ್ತು ಮಿಥಿಲಾ ಮಾತ್ರ ಇದ್ದುದಂತೆ.

"ಚೆಟ್ಟಿಯಪ್ಪರು ಬಹಳ ಒಳ್ಳೆಯ ಮನುಷ್ಯ. ಕೆಲಸಗಾರರನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಮಕ್ಕಳಿಲ್ಲದ ಕೊರಗು ಅವರಿಗಿತ್ತು. ಮನೆ ಕಟ್ಟಲು ನನ್ಗೆ ಹಣ ನೀಡಿದ್ರು. ಒಂದು ಕಾಫಿ ತೋಟವನ್ನು ಉಡುಗೊರೆಯಾಗಿ ನೀಡುವುದಾಗಿಯೂ ಹೇಳಿದ್ದರು. ಅದಕ್ಕೆ ಮಿಥಿಲಾ ವಿರೋಧಿಸಿದ್ದರು. ಇನ್ನೀಗ ಜಾಗ ಸಿಗುವ ಸಾಧ್ಯತೆಯೇ ಇಲ್ಲ." ಬೇಸರ ವ್ಯಕ್ತಪಡಿಸಿದ ಈರಪ್ಪ.

"ಚೆಟ್ಟಿಯಪ್ಪರ ಮನೆಯ ಕೀ ನಿನ್ನಲ್ಲಿದೆಯೆಂದು ಇನ್‌ಸ್ಪೆಕ್ಟರ್ ಹೇಳಿದರು. ಮನೆ ತಲಾಶು ಮಾಡುವುದಿತ್ತು. ಕೊಡಬಹುದೇ?" ಕರಮಚಂದನ ಕೋರಿಕೆ ನನಗೆ ವಿಚಿತ್ರವಾಗಿ ಕಂಡಿತು.

"ಅಲ್ಲೇ ಗೋಡೆಯಲ್ಲಿ ಇದೆ ನೋಡಿ ಕೀ. ಆದರೆ, ಸಂಜೆ ಕೊಡಲೇ? ಕೆಲಸದವಳಿಗೆ ಮನೆ ಗುಡಿಸಲು ಹೇಳಿದ್ದೇನೆ."

"ಓಕೆ."

ಅಲ್ಲಿಂದ ನಾವು ಹೋಗಿದ್ದು ಕಾವೇರಿ ಬ್ಯಾಂಕಿಗೆ. ಅದು ಮಿಥಿಲಾ ಕೆಲಸ ಮಾಡುತ್ತಿದ್ದ ಜಾಗ. ಅಲ್ಲಿ ಆಕೆಯ ಸಹೋದ್ಯೋಗಿ ಪ್ರೇಮ ಎನ್ನುವಾಕೆ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ಸಂಗತಿ ತಿಳಿಸಿದರು. ಮಿಥಿಲಾ ಮತ್ತು ಆ ಸಂಸ್ಥೆಯ ಮ್ಯಾನೇಜರ್ ಸಾಬು ವರ್ಗೀಸ್ ನಡುವೆ ಇತ್ತೀಚಿನಿಂದ ಅಕ್ರಮ